**ದಿನಾಂಕಃ 17.12.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಪ್ರತಿ**ವಾದಿ ಪರ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಈ ದಾವೆಯನ್ನು ನಾನು ಮತ್ತು 1 ರಿಂದ 8 ನೇ ಪ್ರತಿವಾದಿಗಳು ಮಾಲೀಕರು ಎಂದು ಘೋಷಣೆ ಮಾಡಲು ಸಲ್ಲಿಸಿರುತ್ತೇವೆ. ದಾವಾ ಅನುಸೂಚಿ ಸ್ವತ್ತುಗಳನ್ನು ನಮ್ಮ ತಂದೆಯವರು ಖರೀದಿಸಿರುತ್ತಾರೆ. ಸದರಿ ದಾವಾ ಅನುಸೂಚಿ ಸ್ವತ್ತುಗಳನ್ನು ಯಾರಿಂದ ಖರೀದಿ ಮಾಡಿದ್ದಾರೆ ಎಂದು ನಾನು ನನ್ನ ವಾದ ಪತ್ರದಲ್ಲಿ ನಮೂದಿಸಿರುವುದಿಲ್ಲ. ದಾವಾ ಅನುಸೂಚಿ ಸ್ವತ್ತುಗಳ ಪಹಣಿ ಪತ್ರಿಕೆಗಳು ಯಾರ ಹೆಸರಿನಲ್ಲಿ ಬರುತ್ತಿವೆ ಎಂದು ನನಗೆ ಗೊತ್ತಿಲ್ಲ. ನಮ್ಮ ಜಮೀನಿನ ಅಕ್ಕ-ಪಕ್ಕದ ಜಮೀನುಗಳು ಸರ್ಕಾರಕ್ಕೆ ಸ್ವಾಧೀನವಾಗಿದೆ ಎಂದು ಬಂದ ಸುದ್ದಿಯ ಮೇರೆಗೆ ನಾವುಗಳು ದಾವಾ ಅನುಸೂಚಿ ಸ್ವತ್ತಿನ ಪಹಣಿ ಪತ್ರಿಕೆಗಳನ್ನು ತೆಗೆಸಲು ಹೋದಾಗ ನಮಗೆ ದಾವಾ ಅನುಸೂಚಿ ಸ್ವತ್ತಿನ ಪಹಣಿ ಪತ್ರಿಕೆಗಳು ಬೇರೆಯವರ ಹೆಸರಿನಲ್ಲಿ ಇರುವುದು ತಿಳಿದುಬಂದಿತು. ದಾವಾ ಅನುಸೂಚಿ ಸ್ವತ್ತುಗಳು ಈಗ ಯಾವ ಸರ್ವೆ ನಂಬರ್ ಗಳಾಗಿ ಬದಲಾವಣೆ ಅಗಿವೆ ಎಂದು ನನಗೆ ಗೊತ್ತಿಲ್ಲ.

ದಾವಾ ಅನುಸೂಚಿ ಸ್ವತ್ತುಗಳನ್ನು ನಮ್ಮ ಹೆಸರಿಗೆ ವರ್ಗಾವಣೆ ಮಾಡಿಕೊಡಿ ಎಂದು ನಾವು ತಹಶೀಲ್ದಾರ್ ರವರಿಗೆ ನೀಡಿದ ಅರ್ಜಿಯನ್ನು ಈ ದಾವೆಯಲ್ಲಿ ಹಾಜರು ಮಾಡಿರುವುದಿಲ್ಲ. ಸರ್ವೆ ನಂ.16/3 ರಲ್ಲಿ 9 ಗುಂಟೆ ಕರಾಬು ಇದೆ ಎಂದರೆ ಸರಿಯಲ್ಲ. ಸರ್ವೆ ನಂ.10/4 ರಲ್ಲಿ 12 ಗುಂಟೆ ಕರಾಬು ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಎ ಅನುಸೂಚಿ ಸ್ವತ್ತು ನನ್ನ ತಂದೆಯ ಹೆಸರಿನಲ್ಲಿರುತ್ತದೆ. ದಾವಾ ಬಿ ಅನುಸೂಚಿ ಸ್ವತ್ತು ನಮ್ಮ ಮಾರಾಟಗಾರರ ಹೆಸರಿನಲ್ಲಿರುತ್ತದೆ. ಸದರಿಯವರನ್ನು ನಾವು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಈ ದಾವೆ ಸಲ್ಲಿಸುವ ಪೂರ್ವದಲ್ಲಿ 9 ರಿಂದ 11 ನೇ ಪ್ರತಿವಾದಿಗಳಿಗೆ ನಾನು ಯಾವುದೇ ನೊಟೀಸು ನೀಡಿರುವುದಿಲ್ಲ.

ಸರ್ವೆ ನಂ 16/3 ರ ಜಮೀನು ಸರ್ವೆ ನಂ. 10/5 ಆಗಿ ಬದಲಾವಣೆ ಮಾಡುವಂತೆ ನಾನು ಪರಿಹಾರ ಕೋರಿದ್ದೇನೆ. ಸದರಿ ಪರಿಹಾರವನ್ನು ಸರ್ವೆ ಅಧಿಕಾರಿಗಳ ದಾಖಲಾತಿಗಳ ಮೇಲೆ ಕೋರಿರುತ್ತೇನೆ. ಸದರಿ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ನನ್ನ ವಾದ ಪತ್ರದಲ್ಲಿ ಹೇಳಿದಂತೆ ಸರ್ವೆ ನಂ. 10/1(ಎ), 10/1(ಬಿ), 10/2 ರಿಂದ 10/5 ರವರೆಗಿನ ಜಮೀನುಗಳು

ಭೂಸ್ವಾಧೀನವಾಗಿರುವುದಿಲ್ಲ. ಸರ್ಕಾರದಿಂದ ಪರಿಹಾರ ಪಡೆದುಕೊಳ್ಳುವ ಉದ್ದೇಶದಿಂದ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಗಳು 2008-09 ನೇ ಇಸವಿಯಲ್ಲಿ ನಮ್ಮ ಜಮೀನಿಗೆ ಬಂದು ತೊಂದರೆ ನೀಡಿರುತ್ತಾರೆ. 9 ರಿಂದ 11 ನೇ ಪ್ರತಿವಾದಿಗಳು ಯಾವುದೇ ರೀತಿ ತೊಂದರೆ ನೀಡದಿದ್ದರು ಸಹ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಬಳಿ ದಾವಾ ಅನುಸೂಚಿ ಸ್ವತ್ತುಗಳಿಗೆ ಸಂಬಂಧಿಸಿದಂತೆ ಯಾವುದೇ ದಾಖಲಾತಿಗಳು ಇಲ್ಲದೆ ಇರುವುದರಿಂದ 9 ನೇ ಪ್ರತಿವಾದಿಯವರು ಖಾತೆ ಬದಲಾವಣೆ ಮಾಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸೀಪುರ